ನನ್ನ ಪ್ರಕಾರ ಅವರು ರಾಷ್ಟ್ರೀಯ ಸಂಪತ್ತು. ನಾನು ಸ್ವಲ್ಪ ವರ್ಷ ಬೆಂಗಳೂರಿನಲ್ಲಿ ಇದ್ದದ್ದರಿಂದ ನನಗೆ ಅವರ ಪುಸ್ತಕಗಳ ಪರಿಚಯ ಆಯಿತು. ನನ್ನ ತಾಯಿ ಅವರ 'ಪರ್ವ'ವನ್ನು ಹಿಂದಿ ಭಾಷಾಂತರದಲ್ಲಿ ಓದಿದ್ದಾರೆ. ತಾಯಿ ಹೇಳಿದ ಮೇಲೆ ನಾನು ಓದಿದೆ. ದೇಶದಾದ್ಯಂತ ಅವರನ್ನು ಸರಿಯಾಗಿ ಮಾರ್ಕೆಟ್ ಮಾಡಲಿಲ್ಲ. ಅವರ ಪುಸ್ತಕಗಳು ಅದ್ಭುತವಾಗಿರುತ್ತವೆ. ಮಲಯಾಳಂ ಲೇಖಕ ಎಂ.ಟಿ. ವಾಸುದೇವನ್ ನಾಯರ್ ಅವರದ್ದೂ ಇದೇ ಕಥೆ. ಮರಾಠಿ ಲೇಖಕ ಶಿವಾಜಿ ಸಾವಂತ್, ಹಿಂದಿಯ ನರೇಂದ್ರ ಕೊಹ್ಲಿ ಇವರೆಲ್ಲರೂ ಅವರ ಭಾಷೆಯಲ್ಲಿ ಹೆಸರುಗಳಿಸಿದವರು. ಮಾರ್ಕೆಟ್ ಸರಿ ಮಾಡದ ಕಾರಣ ಅವರು ಆ ಭಾಷೆಯನ್ನು ಬಿಟ್ಟು ಹೊರಗಿನ ಓದುಗರಿಗೆ ಪರಿಚಯವಾಗಲಿಲ್ಲ. ಪುಸ್ತಕಗಳಿಗೆ ಮಾರುಕಟ್ಟೆ ಇರುತ್ತದೆ. ಆದರೆ, ಜನರಿಗೆ ಇಂಥದ್ದೊಂದು ಪುಸ್ತಕ ಇದೆ ಎನ್ನುವುದನ್ನು ತಿಳಿಸಬೇಕಲ್ಲ. ಇಲ್ಲಿಯೇ ಸಮಸ್ಯೆ ಇರುವುದು.

- **ರಾಮಾಯಣ–ಮಹಾಭಾರತ ಕಥೆಗಳನ್ನು ಭಾರತೀಯರು ತಂತಮ್ಮ ಭಾಷೆಯಲ್ಲೇ ಕೇಳಿ–ಓದಿ ಅರ್ಥ ಮಾಡಿಕೊಳ್ಳುತ್ತಾರೆ, ಆನಂದಿಸುತ್ತಾರೆ. ಹೀಗಿದ್ದರೂ, ನೀವು ಇಂಗ್ಲಿಷ್‌ನಲ್ಲೇ ಯಾಕೆ ಬರೆಯುತ್ತೀರಿ?**

**ನೀವು ತುಳಸಿದಾಸರ ರಾಮಚರಿತ ಮಾನಸ ಕೇಳಿರಬಹುದು. ಅದರಲ್ಲಿ ಒಂದು ಮಾತಿದೆ. 'ಹರಿ ಅನಂತ, ಹರಿಕಥಾ ಅನಂತ' ಎಂಬುದಾಗಿ. ನಮಗೆ ನಮ್ಮ ದೇವಾನುದೇವತೆಗಳ ಕಥೆ ಕೇಳಿಯೇ ಮುಗಿಯುವುದಿಲ್ಲ. ಕಥೆಗಳೊಂದಿಗೆ ನಾವು ಹುಟ್ಟಿದ್ದೇವೆ. ಯಾವುದೇ ಪ್ರದೇಶ-ಭಾಷೆ ಇರಲಿ, ಹಿಂದು-ಮುಸ್ಲಿಂ ಯಾವುದೇ ಜಾತಿ ಇರಲಿ, ಎಲ್ಲರಿಗೂ ರಾಮಾಯಣದ ಕಥೆ ಗೊತ್ತಿರುತ್ತದೆ. ಶಿವನ ಅನುಗ್ರಹದಿಂದ ನಾನು ಇದನ್ನೇ ವೃತ್ತಿಯಾಗಿ ಮಾಡಿಕೊಂಡಿದ್ದೇನೆ. ನಾನು ಬರೆಯುತ್ತಲೇ ಇರುತ್ತೇನೆ. ನನ್ನ ಬರಹವನ್ನು ಯಾರೂ ಓದದಿದ್ದರೂ ಅಡ್ಡಿಯಿಲ್ಲ. ನನಗೆ ಅವುಗಳ ಬಗ್ಗೆ ಹುಚ್ಚು ಪ್ರೀತಿ ಇದೆ. ಈ ಕಥೆಗಳು ನನ್ನನ್ನು ಈ ನೆಲಕ್ಕೆ-ಬೇರಿಗೆ ಮರಳಿಸುತ್ತವೆ.**

